

# ಕನ್ನಡಿ ಗಂಟು ಗಮ್ಮತ್ ಉಂಟು!

ಪ್ರತಿಬಿಂಬ ಉಂಟುಮಾಡುವ ಕನ್ನಡಿ ಎಂಬ ವಸ್ತುವಿನ ಉಪಯೋಗ ಹಲವಾರು. ದರ್ಪಣ, ಮುಕುರ ಇತ್ಯಾದಿ ಹೆಸರಿನಿಂದಲೂ ಕರೆಯುವ ಕನ್ನಡಿ ಎಲ್ಲರ ಮನೆಯಲ್ಲಿ ಇರಲೇಬೇಕಾದ ಅಗತ್ಯ ವಸ್ತು. ಬೇಲೂರಿನ ಶಿಲಾಬಾಲಿಕೆಯರಲ್ಲಿ ಮುಕುರಮುಗ್ಧೆ, ದರ್ಪಣ ಸುಂದರಿ ಹೆಸರಿನ ಶಿಲ್ಪಗಳು ಇವೆ ಎಂಬುದು ಗಮನಾರ್ಹ.

■ **ಸುಮಾ ವೀಣಾ, ಹಾಸನ**

‘ಅಂಗೈ ಹುಣ್ಣಿಗೆ ಕನ್ನಡಿ ಬೇಕೆ?’ ಇದು ಹಳೆಯ ಗಾದೆ. ಎದುರಿಗೇ ಇರುವ ಸತ್ಯವನ್ನು ಕಂಡುಕೊಳ್ಳಲು ಕನ್ನಡಿಯ ಮರು ಅವಶ್ಯಕತೆಯಿಲ್ಲ ಎಂಬುದು ಇದರ ಮರ್ಮ. ‘ನಗುವೇ ಜೀವನದ ಕನ್ನಡಿ, ನಗುವೇ ಜೀವನದ ಕ್ಯಾಮೆರಾ’ ಎಂದು ಷಡಕ್ಷರಿಯವರ ಮಾತು ಕನ್ನಡಿಯ ಮಹತ್ವವನ್ನು ಹೇಳುತ್ತದೆ.

‘ಮನಸ್ಸು ಕನ್ನಡಿ’ ಎಂಬ ಮಾತೂ ನೆನಪಾಯಿತೆ? ಒಂದಷ್ಟು ಜನರಿಗೆ ಮನಸ್ಸಿನ ಭಾವನಗೆಳನ್ನು ಹೊರ ಹಾಕುವುದು ಸುಲಭ ಕೆಲವೊಮ್ಮೆ ಸಭ್ಯರು ಎಂದು ನಟಿಸಬೇಕಲ್ಲ ಆಗ ಬಾಯಲ್ಲಿ ಒಳ್ಳೆಯ ಮಾತಾಡಿದರೂ ಅವರ ಹಾವ ಭಾವ ಅವರ ಮನಸ್ಥಿತಿಯನ್ನು ಸಾಬೀತು ಮಾಡುತ್ತದೆ. ಬೇಡ ಬೇಡ ಎಂದರೂ ಅವರ ಹತಾಶೆ, ವ್ಯಂಗ್ಯ, ಅಸಹನೆ, ಈರ್ಷ್ಯೆಯನ್ನು ಮುಖ ತಿರುಗಿಸುವುದು, ಕೈ ಆಡಿಸುವುದು, ಕತ್ತು ತಿರುಗಿಸುವುದರ ಮೂಲಕ ತೋರಿಸಿಬಿಡುತ್ತಾರೆ. ಅಂತರಂಗದಲ್ಲಿ ಅಡಗಿಸಿಕೊಂಡ ಕೆಸರನ್ನು ಮುಖಕ್ಕೆ ರಾಚುವಂತೆ ಎರಚಿದರೇನೋ ಎಂದನ್ನಿಸಿಬಿಡುತ್ತದೆ. ಒಂದು ರೀತಿ ಒಳ್ಳೆಯದೇ! ಎದುರಿಗಿದ್ದವರಿಗೆ ಅವರ ಜೊತೆ ವ್ಯವಹರಿಸಲು ಮಾರ್ಗ ಸೂಚಿಯನ್ನು ಅವರೇ ಹಾಕಿಕೊಟ್ಟಂತೆ ಆಗುತ್ತದೆ. ಒಳ್ಳೆಯದೇ ಅಲ್ವೇ! ಇಂಥವರನ್ನು ‘ಬಾಯಲ್ಲಿ ಬೆಣ್ಣೆ ಬಗಲಲ್ಲಿ ದೊಣ್ಣೆ’ ಹಿಡಿಯುವವರ ಗುಂಪಿಗೆ ಸೇರಿಸಬಹುದು. ಏನಂತೀರಿ?

ಇರಲಿ, ಕನ್ನಡಿ ಎಂದರೆ ಪ್ರತಿಫಲನ ವಸ್ತುಗಳ ಪ್ರತಿಬಿಂಬವನ್ನು ಉಂಟು ಮಾಡುವ ಉಪಕರಣ. ಸಾಮಾನ್ಯವಾಗಿ ಬೆಳಕನ್ನು ಪ್ರತಿಫಲಿಸುವ ಉಪಕರಣ ಕನ್ನಡಿ ಎಂದರೂ ತಪ್ಪಿಲ್ಲ. ಸಂಸ್ಕೃತದ ‘ದೃಪ್’ ಎಂಬ ಧಾತುವಿನಿಂದ ರೂಪುಗೊಂಡ ದರ್ಪಣ. ಈ ಶಬ್ದಕ್ಕೆ ದರ್ಪಣ, ಮುಕುರ ಇತ್ಯಾದಿ ಹೆಸರಿನಿಂದಲೂ ಕರೆಯುತ್ತಾರೆ. ಬೇಲೂರಿನ ಶಿಲಾಬಾಲಿಕೆಯರಲ್ಲಿ ಮುಕುರಮುಗ್ಧೆ,